ಶ್ರೀ ಕೆ ಹೆಚ್. ಪಾಟೀಲ್.—ಗೊಬ್ಬರವನ್ನು ಯಾವ ಯಾವ ಹಂತದಲ್ಲಿ ಕೊಡಬೇಕು ಎಂದು ನೋಡಿಕೊಂಡು ಹಂಚಲಾಗುತ್ತಿದೆ ಮತ್ತು ಆದಷ್ಟು ಹೆಚ್ಚು ಗೊಬ್ಬರವನ್ನು ಖರೀದಿ ಮಾಡಬೇಕೆಂದು ಸರಕಾರ ವಿಶೇಷ ಪ್ರಯತ್ನ ಮಾಡುತ್ತಿದೆ. ಮದ್ರಾಸು ಕಡೆಯಿಂದ ಎಲ್ಲೆಲ್ಲಿ ಸಿಗುತ್ತದೋ ಅಲ್ಲಿಂದ ತರಿಸಿ ಕೂಂಡು ಅವನ್ನು ಡಿಸ್ಟ್ರಿಬ್ಯೂಟು ಮಾಡಲಾಗಿದೆ. ಆದರೆ ಇದರ ಬೆಲೆ ಹೆಚ್ಚಾಗಿದೆ ಎಂದು ಹೇಳಿದರು. ಎಲ್ಲಿ ಹೆಚ್ಚು ಬೆಲೆಯಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ಸರಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಅತಿ ಶೀಘ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಇಲ್ಲಿ ಕೊಡುತ್ತೇನೆ.

1-30 P.M.

SRI B. B. SAYANAK.—There is accute shortage of foodgrains in Belgaum and prices are soaring up. Will the Government take drastic steps against the blackmerketeers ?

MADAM SPEAKER.—That is not allowed.

CONSTRUCTION OF A BUS STAND AT GORUR VILLAGE

744. SRI K. H. HANUME GOWDA (Hassan).—

Will the Minister for Labour be pleased to state :—

(*a*) whether it is a fact that the M.S.R.T.C has sanctioned an estimate for constructing a bus stand at Gorur village of Hassan Taluk.

(*b*) if so, the estimated amount ;

(*c*) whether it is a fact that the ex-transport Minister had laid the foundation stone for starting construction work of the bus-stand ;

(*d*) if so, the progress achieved so far in this behalf ?

SRI AZEEZ SAIT (Minister for Labour).—

(*a*) No.

(*b*) Does not arise in view of reply to clause (*a*).

(*c*) Yes.

(*d*) The work has not yet been started

ಶ್ರೀ ಕೆ. ಎಚ್. ಹನುಮೇಗೌಡ.—ಈ ಬಸ್‌ಸ್ಟಾಂಡ್ ನಿರ್ಮಿಸಲು ಅಸ್ತಿಭಾರ ಹಾಕಿದ್ದು ಯಾವಾಗ ?

†ಶ್ರೀ ಅಜೀಜ್ ಸೇಟ್.—ತಾ : ೧೨ನೇ ಸೆಪ್ಟೆಂಬರ್ ೧೯೬೬ರಂದು

ಶ್ರೀ ಕೆ. ಎಚ್. ಹನುಮೇಗೌಡ.—ಎಸ್ಟಿಮೇಟ್ ಮಂಜೂರು ಆಗದೆ ಅಸ್ತಿಭಾರ ಹಾಕಿದ್ದು ಏತಕ್ಕಾಗಿ ?

ಶ್ರೀ ಅಜೀಜ್ ಸೇಟ್.—ಬಸ್‌ಸ್ಟಾಂಡ್ ಕಟ್ಟಬೇಕು ಎಂದು ಅಸ್ತಿಭಾರ ಹಾಕಲಾಯಿತು.

ಶ್ರೀ ಕೆ. ಎಜ್. ಹನುಮೇಗೌಡ.—೧೯೬೬ರಲ್ಲಿ ಅಸ್ತಿಭಾರ ಶಿಲೆಯಂನ್ನು ಹಾಕಲಾಯಿತಂ ಎಂದು ಹೇಳಿದಿರಿ. ಅಲ್ಲಿಂದ ಇಲ್ಲಿಯವರೆಗೆ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಅಜೀಜ್ ಸೇಟ್.—ಈ ಬಸ್‌ಸ್ಟಾಂಡ್ ಕಟ್ಟುವ ಬಗ್ಗೆ ಜಮೀನನ್ನು ತಾ : ೨ನೇ ಜೂನ್ ೧೯೬೬ ರಂದು ಸ್ವಾಧೀನಪಡಿಸಿಕೊಳ್ಳಲಾಯಿತು. ಕಟ್ಟಡ ಯಾವ ರೀತಿ ಕಟ್ಟಬೇಕು ಎಂಬ ಬಗ್ಗೆ ಪ್ಲಾನ್ ತಯಾರಿಸಬೇಕಾಗಿದೆ. ಅಲ್ಲಿ ಅಸ್ತಿಭಾರ ಶಿಲೆ ಹಾಕಿದ್ದು, ಅದನ್ನು ಇದುವರೆಗೆ ಏತಕ್ಕೆ ಕಟ್ಟಿಸಲಿಲ್ಲ ಎಂಬ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಈಗ ಅಪೇಕ್ಷೆ ಪಡುವುದಿಲ್ಲ. ಎಲ್ಲೆಲ್ಲಿ ಅಗತ್ಯವಾಗಿ ಬಸ್‌ಸ್ಟಾಂಡ್ ಗಳನ್ನು ಕಟ್ಟಿಸಬೇಕು ಎಂಬ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದೇವೆ. ಅದರಿಂದ ಇನ್ನು ಒಂದು ತಿಂಗಳಲ್ಲಿ ವರದಿ ಬರಬಹುದು. ಈಗ ಎಲ್ಲ ಕಡೆಗಳಲ್ಲಿಯೂ ಒಂದೇ ಸಲ ಕಟ್ಟಿಸುವುದಕ್ಕಾಗುವುದಿಲ್ಲ. ಕಮಿಟಿಯವರ ವರದಿ ಬಂದಮೇಲೆ ಅದಕ್ಕೆ ಒಂದು, ಎರಡು ಮೂರು ಎಂದು ಪ್ರಯಾರಿಟಿ ಕೊಟ್ಟು ಅದರಂತೆ ಕಟ್ಟಿಸುತ್ತೇವೆ. ಬಸ್‌ಗಳು ಓಡಾಡದೇ ಇರುವ ಕಡೆಗಳಲ್ಲಿ ಬಸ್‌ಸ್ಟಾಂಡ್ ಕಟ್ಟಿಸಿಕೊಡಬೇಕೆಂದು ಹೇಳುವ ಸಂದರ್ಭಗಳು ಸಹ ಇವೆ. ಆದ್ದರಿಂದ ಪ್ರಯಾರಿಟಿ ನೋಡಿಕೊಂಡು ಮಾಡಬೇಕಾಗುತ್ತದೆ. ಗೊರೂರಿನಲ್ಲಿಯೂ ಜಾಗ್ರತೆ ಬಸ್‌ಸ್ಟಾಂಡ್ ಕಟ್ಟಿಸಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಬಸ್‌ಸ್ಟಾಂಡ್ ಕಟ್ಟಲಿಕ್ಕೆ ಅಸ್ತಿಭಾರ ಶಿಲೆ ಹಾಕಲಾಯಿತೆಂದು ಮಾನ್ಯ ಮಂತ್ರಿಗಳು ಹೇಳಿದರು. ಎಷ್ಟು ದಿವಸಗಳಲ್ಲಿ ಈ ಕೆಲಸವಾಗುತ್ತದೆ, ಮತ್ತು ಈ ಕೆಲಸವಾಗದಿರುವುದಕ್ಕೆ ರಾಜಕೀಯದ ಅಡ್ಡಿ ಏನಾದರೂ ಇದೆಯೇ ?

ಶ್ರೀ ಅಜೀಜ್ ಸೇಟ್.—ಅಡ್ಡಿಯೇನೂ ಇಲ್ಲ. ಕಾಲ, ಶಾಸ್ತ್ರಗಳಿಗೆ ಚೆನ್ನಾಗಿತ್ತು ಎಂದು ಆ ಸಮಯದಲ್ಲಿ ಅಸ್ತಿಭಾರ ಶಿಲೆ ಹಾಕಿರಬಹುದು. ಪ್ಲಾನ್ ಅಂಡ್ ಎಸ್ಟಿಮೇಟ್ ಆಗದೆ ಇದುವರೆಗೆ ಆ ಕೆಲಸ ವಾಗಿಲ್ಲ. ಆದಷ್ಟು ಶೀಘ್ರದಲ್ಲಿಯೇ ಗೊರೂರಿನಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸಿಕೊಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಇಲಾಖೆಯ ಮಂಜೂರಾತಿ ಇಲ್ಲದೆ ಮಾಜಿ ಮಂತ್ರಿಗಳು ಇದಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿರುವುದರಿಂದ, ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಅಲ್ಲಿ ಬಸ್‌ಸ್ಟಾಂಡ್ ಕಟ್ಟಬೇಕೆಂದು ಜಾಗ ತೆಗೆದುಕೊಳ್ಳಲಾಗಿದೆ. ಆಂದು ಶಾಸ್ತ್ರ, ಕಾಲ, ಘಳಿಗೆ ಚೆನ್ನಾಗಿತ್ತೆಂದು ಅಸ್ತಿಭಾರ ಶಿಲೆ ಹಾಕಿರಬಹುದು. ಈಗ ಅದನ್ನು ಕಟ್ಟಿಸಿಕೊಡುವ ಭಾರ ನನ್ನದು.

WATER SUPPLY TO SHORAPUR TOWN

745. SRI RAJAPID NAIK (Shorapur).—

Will the Minister for Municipal Administration be pleased to stat ;—

(*a*) whether work of Water Supply at Shorapur Town has been started ;

(*b*) if so, since when ;

(*c*) the period within which it is expected to be completed ?

SRI B. BASAVALINGAPPA (Minister for Municipal Administration).—

(*a*) Yes.

(*d*) 24th December 1971.

(*c*) By the middle of 1975.

SRI RAJA PID NAIK.—May I know the estimated cost of the work ?

†SRI B. BASAVALINGAPPA.—It is 30 laks 50 thousands and the technical sanction has now come to about Rs. 31,50,000.